154ಎಲ್ಡಿ ವಿ-330 (56)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಇವರು ನಿಯಮ 330ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ:**

**"ಒಂದು ಬಾರಿ ಯಾವುದೇ ಭೂಮಿ ದೇವಸ್ಥಾನದ ಭೂಮಿ ಎಂದು ದಾಖಲೆಗಳಲ್ಲಿ ಕಂಡು ಬಂದಲ್ಲಿ, ಆ ಭೂಮಿಯು ಖಾಯಂ ಆಗಿ ದೇವಸ್ಥಾನದ ಭೂಮಿಯೇ ಆಗಿರುವಂತೆ ಮಾಡಬೇಕಾದಲ್ಲಿ ಸದರಿ ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡುವುದರಿಂದ ಮಾತ್ರವೇ ಸಾಧ್ಯ. ಈ ಕುರಿತು ಕಾನೂನಿಗೆ ತಿದ್ದುಪಡಿ ತಂದು ಎಲ್ಲಾ ದೇವಸ್ಥಾನಗಳ ಭೂಮಿಯನ್ನು ಸಂಬಂಧಿತ ದೇವಸ್ಥಾನಗಳ ದೇವರ ಹೆಸರಿನಲ್ಲಿಯೇ ಖಾತೆ ಹಾಗೂ ಪಹಣಿಯಲ್ಲಿ ದಾಖಲಾಗುವ ಕುರಿತು ಚರ್ಚಿಸಲು ಅನುಮತಿಸುವ ಕುರಿತು" ನಿಯಮ 330ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಸಾರಿಗೆ ಮತ್ತು ಮುಜರಾಯಿ ಸಚಿವರ ಹೇಳಿಕೆ:**

**ಉತ್ತರ:-**

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳು/ಸಂಸ್ಥೆಗಳ ಬಹುತೇಕ ಜಮೀನುಗಳು ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆಗಳಡಿಯಲ್ಲಿ ಸರ್ಕಾರದಲ್ಲಿ ವಿಹಿತವಾಗಿದ್ದು, ಈ ರೀತಿ ಸರ್ಕಾರದಲ್ಲಿ ವಿಹಿತವಾಗಿರುವ ಜಮೀನುಗಳನ್ನು ಹೊರತುಪಡಿಸಿ, ದೇವಾಲಯಕ್ಕೆ ಸೇರಿದ ಉಳಿದೆಲ್ಲ ಜಮೀನುಗಳನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:11.12.2020ರ ಪತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಜಮೀನುಗಳ ದಾಖಲೆಗಳನ್ನು ನವೀಕರಿಸಿ ನಿರ್ವಹಿಸಲು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೂಡಲೇ ಅಗತ್ಯ ಕ್ರಮ ವಹಿಸುವಂತೆ ನಿರ್ದೇಶನವನ್ನು ನೀಡಿರುತ್ತಾರೆ. ಅದರಂತೆ ಕ್ರಮವಹಿಸಲಾಗಿರುತ್ತದೆ.

ಸರ್ಕಾರದ ದಿನಾಂಕ:11.11.2021ರ ಪತ್ರದಲ್ಲಿ ಕರ್ನಾಟಕ ರಾಜ್ಯಪುಟದಲ್ಲಿ ಪ್ರಕಟಿಸಲಾದ ಅಧಿಸೂಚಿತ ದೇವಾಲಯಗಳ ಪಟ್ಟಿಯಲ್ಲಿರುವ ದೇವಸ್ಥಾನ/ಧಾರ್ಮಿಕ ಸಂಸ್ಥೆಗಳು ಹೊಂದಿರುವ ಜಮೀನು ಮತ್ತು ಅವುಗಳಿಗೆ ಸೇರಿರುವ ಇತರೆ ಜಮೀನುಗಳ ಆರ್.ಟಿ.ಸಿ.ಯಲ್ಲಿ "ದೇವಸ್ಥಾನ ಹೆಸರು" ಮತ್ತು "ಧಾರ್ಮಿಕ ದತ್ತಿ ಇಲಾಖೆ" ಎಂದು ನಮೂದಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: WP27/2018 (LB-RES) ದಿನಾಂಕ:14-09-2023ರಲ್ಲಿ "..............to the notice of the Endowment Commissioner, who shall inform all the concerned authorities to make necessary entries in the name of the deity whenever any property is transferred to such temple, either by a government agency or by a private person. All the properties are

necessarily to stand in the name of the deity, and the managing committee or any other person managing the temple would not have any individual right, title, or interest in the said property. -ಎಂದು ಆದೇಶ ನೀಡಿದ್ದು, ಅದರನ್ವಯ ದೇವಾಲಯದ ಹೆಸರಿಗೆ ಖಾತೆ ದಾಖಲು ಮಾಡಿ **ದೇವಾಲಯದ ಹೆಸರು- ಧಾರ್ಮಿಕ ದತ್ತಿ ಇಲಾಖೆ** ಎಂದು ಪಹಣಿಯಲ್ಲಿ ನಮೂದಿಸುವ ಬಗ್ಗೆ ಕ್ರಮವಹಿಸಿ ಪಾಲನಾ ವರದಿಯನ್ನು ಸಲ್ಲಿಸುವಂತೆ ಈಗಾಗಲೇ ದಿನಾಂಕ:20.08.2024ರ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತೆ.

ಮುಂದುವರೆದು, ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳ ಆಸ್ತಿ/ಜಮೀನುಗಳ ಇಂಡೀಕರಣ ಮತ್ತು ಅಳತೆ ಕಾರ್ಯ ಕುರಿತಂತೆ ಮೇಲುಸ್ತುವಾರಿ ಮಾಡಲು ಕೇಂದ್ರಸ್ಥಾನಿಕ ಸಹಾಯಕರು-2 ರವರನ್ನು ಎಸ್ಟೇಟ್ ಆಫೀಸರ್‌ರನ್ನಾಗಿ ನೇಮಿಸಲಾಗಿರುತ್ತದೆ.

ದಿನಾಂಕ:13.11.2024ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಎಲ್ಲಾ ದೇವಾಲಯದ ಹೆಸರಿಗೆ ಖಾತೆ ದಾಖಲು ಮಾಡಿ **ದೇವಾಲಯದ ಹೆಸರು- ಧಾರ್ಮಿಕ ದತ್ತಿ ಇಲಾಖೆ** ಎಂದು ಪಹಣಿಯಲ್ಲಿ ನಮೂದಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ದೇವಾಲಯದ ಆಸ್ತಿಗೆ ಖಾತೆ ದಾಖಲು ಮಾಡಿ **ದೇವಾಲಯದ ಹೆಸರು- ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರ** ಎಂದು ನಮೂದಿಸಲು ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.

ಈಗಾಗಲೇ ಹಾಸನ ಜಿಲ್ಲೆ, ಯಾದಗಿರಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳಿಗೆ ಸೇರಿದ ಕೆಲವು ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡಲಾಗಿರುತ್ತದೆ.

ಮೇಲೆ ವಿವರಿಸಿರುವಂತೆ ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳ ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡುವ ಕುರಿತಂತೆ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ:ಕಂಇ 5 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು